**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ೦೫.೦೬.೨೦೧೪ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೧೨ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೧೨ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜೂನ್ ೦೫, ೨೦೧೪ರ ಗುರುವಾರ ಅಪರಾಹ್ನ ೦೨.೦೦** ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | ಪ್ರೊ. ಶ್ರೀನಿವಾಸ ವರಖೇಡಿ, ಮಾನ್ಯ ಕುಲಪತಿಗಳು (ಪ್ರ) | ಅಧ್ಯಕ್ಷರು |
| ೨. | ವಿದ್ವಾನ್ ಚಂದ್ರಶೇಖರಯ್ಯ, ರಾಮನಗರ | ಸದಸ್ಯರು |
| ೩. | ವಿದ್ವಾನ್ ಶ್ರೀನಿವಾಸಮೂರ್ತಿ, ಮೈಸೂರು | ಸದಸ್ಯರು |
| ೪. | ಡಾ. ಸಿ. ಪಾಲಯ್ಯ, ಚಿತ್ರದುರ್ಗ | ಸದಸ್ಯರು |
| ೫. | ವಿದ್ವಾನ್ ರಾಮಚಂದ್ರ ನಾ. ಭಟ್ಟ, ಉಮ್ಮಚಗಿ | ಸದಸ್ಯರು |
| ೬. | ವಿದ್ವಾನ್ ನರಸಿಂಹ ಭಟ್, ಸೋಂದಾ | ಸದಸ್ಯರು |
| ೭. | ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ್, ಧಾರವಾಡ | ಸದಸ್ಯರು |
| ೮. | ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಡೀನ್, ವೇದಾಂತ ನಿಕಾಯ | ಸದಸ್ಯರು |
| ೯. | ಪ್ರೊ. ವಿ. ಗಿರೀಶ್‌ಚಂದ್ರ, ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ, ಉಮ್ಮಚಗಿ | ಸದಸ್ಯರು |
| ೭. | ಡಾ. ಬಿ.ಎಸ್. ಮಹದೇವಯ್ಯ, ರಾಣಿಬೆನ್ನೂರು | ಸದಸ್ಯರು |
| ೮. | ಡಾ. ಪದ್ಮಾಶೇಖರ್, ಮೈಸೂರು | ಸದಸ್ಯರು |
| ೯. | ಪ್ರೊ. ಬಿ. ಮಹಾದೇವನ್, ಬೆಂಗಳೂರು | ಸದಸ್ಯರು |
| ೧೦. | ಡಾ. ಭಗವಂತ ಲಕ್ಷ್ಮಣ ನಡೋಣಿ, ಧಾರವಾಡ | ಸದಸ್ಯರು |
| ೧೧. | ಡಾ. ಭಾಷ್ಯಂಸ್ವಾಮಿ, ಮೈಸೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಿಕ್ಷಣ ಪರಿಷತ್ ಹತ್ತನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 07.05.2014ರಂದು ನಡೆದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಹನ್ನೊಂದನೆಯ ಸಭೆಯಲ್ಲಿ ಚರ್ಚಿತವಾದ **ವಿಷಯ ಸಂಖ್ಯೆ 2, 3, 4, 5, 6ಕ್ಕೆ** ಸಂಬಂಧಿಸಿದಂತೆ ತೃತೀಯ ದೀಕ್ಷಾಂತ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಕ್ರಮವಹಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 2: ತತ್ವಸಂಶೋಧನ ಸಂಸತ್ ಸಂಶೋಧನ ಕೇಂದ್ರಕ್ಕೆ ಮಾನ್ಯತೆ ನೀಡಿರುವ ಬಗೆಗೆ ಘಟನೋತ್ತರ ಅನುಮೋದನೆಯ ಕುರಿತು.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009; ಪರಿಚ್ಛೇದ 47ರ ಅಡಿಯಲ್ಲಿ ಸಂಶೋಧನ ಕೇಂದ್ರ ಮಾನ್ಯತಾ ಪರಿನಿಯಮ–2012ರನ್ನು ರಚಿಸಿದ್ದು, ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರ ಮಾನ್ಯತಾ ಪರಿಶೀಲನಾ ಸಮಿತಿಯು ದಿನಾಂಕ 04.03.2014ರಂದು ಉಡುಪಿಯ ಶ್ರೀ ತತ್ವ ಸಂಶೋಧನ ಸಂಸತ್ ಸಂಶೋಧನ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾನ್ಯತೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ಈ ಸಂಸ್ಥೆಗಳಿಗೆ ವಿಶ್ವವಿದ್ಯಾಲಯವು ಸಂಶೋಧನ ಕೇಂದ್ರವೆಂಬ ಮಾನ್ಯತೆ ನೀಡಿದೆ. ಈ ಸಂಸ್ಥೆಯು ಉತ್ತಮ ಗ್ರಂಥಾಲಯ, ನುರಿತ ಸಂಶೋಧಕರು, ತುಳು ಲಿಪಿ ಪ್ರಶಿಕ್ಷಣ

ಕೇಂದ್ರ ಹಾಗೂ ಸಂಶೋಧನಕ್ಕೆ ಅವಶ್ಯವಾದ ಮೂಲಭೂತ ಸೌಲಭ್ಯವನ್ನು ಹೊಂದಿರುವ ಕಾರಣ ಮಾನ್ಯತೆ ಪಡೆದಿದೆ. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: ನಿಯಮಾನುಸಾರ ಪರಿಶೀಲಿಸಿ ಸಭೆಯು ಒಪ್ಪಿಗೆ ನೀಡಿತು.

**ವಿಷಯ 3: 2014–15ನೇ ಸಾಲಿನ ಎಂ.ಫಿಲ್–ವಿಶಿಷ್ಟಾಚಾರ್ಯ ಹಾಗೂ ಪಿಎಚ್.ಡಿ–ವಿದ್ಯಾವಾರಿಧಿ ತರಗತಿಗಳನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯವು 2014–15ನೇ ಸಾಲಿನ ಎಂ.ಫಿಲ್ (ವಿಶಿಷ್ಟಾಚಾರ್ಯ) ಹಾಗೂ ಪಿಎಚ್.ಡಿ (ವಿದ್ಯಾವಾರಿಧಿ) ಪದವಿಯನ್ನು ಪ್ರಾರಂಭಿಸುವುದಕ್ಕೆ ಸುತ್ತೋಲೆ ಕಳುಹಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆ ಹಾಗೂ ಮೌಖಿಕ ಪರೀಕ್ಷೆಯನ್ನು ನಡೆಸಿ ಮತ್ತು ವಿಶ್ವವಿದ್ಯಾಲಯದ ನಿಯಮದಂತೆ ತರಗತಿಗಳನ್ನು ಪ್ರಾರಂಭಿಸಲಾಗುವುದು. ಇದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: ೨೦೧೪–೧೫ನೇ ಸಾಲಿನ ಎಂ.ಫಿಲ್. (ವಿಶಿಷ್ಟಾಚಾರ್ಯ) ಹಾಗೂ ಪಿಎಚ್.ಡಿ. (ವಿದ್ಯಾವಾರಿಧಿ) ಕೋರ್ಸುಗಳನ್ನು ನಡೆಸಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ 4: ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲು ವಿವಿಧ ಸಂಸ್ಥೆಗಳಿಗೆ ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ ಹಾಗೂ 'ಅಧ್ಯಯನ ಮಂಡಳಿ' ರಚಿಸಿದ ಪಾಠ್ಯಕ್ರಮವನ್ನು ಅಳವಡಿಸಲು ಅನುಮತಿ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2014–15ನೇ ಸಾಲಿನಿಂದ ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಿದೆ. ಈ ಕೋರ್ಸ್‌ಗಳನ್ನು ನಡೆಸಲು ಅನುಮತಿ ನೀಡುವಂತೆ ಹಲವು ಜ್ಯೋತಿಷ್ಯ ಸಂಸ್ಥೆಗಳು ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿದ್ದವು. ವಿಶ್ವವಿದ್ಯಾಲಯವು ನೇಮಿಸಿದ ತ್ರಿಸದಸ್ಯ ಸಮಿತಿಯು ಈ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲನಾ ವರದಿಯನ್ನು ನೀಡಿದೆ. ತ್ರಿಸದಸ್ಯ ಸಮಿತಿಯ ಶಿಫಾರಸ್ಸಿನನ್ವಯ ಕೆಳಕಂಡ ಜ್ಯೋತಿಷ್ಯ ಸಂಸ್ಥೆಗಳಿಗೆ ಮಾನ್ಯತೆ ನೀಡಲಾಗಿದ್ದು, ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

| ಕ್ರಸಂ. | ಸಂಸ್ಥೆಯ ಹೆಸರು | ವಿಳಾಸ |
|---|---|---|
| 1 | ಶ್ರೀ ವಾಣಿ ಜ್ಯೋತಿಷ್ಯ ಟ್ರೈನಿಂಗ್ ಎಂಡ್ ರಿಸರ್ಚ್ ಟ್ರಸ್ಟ್ | ನಂ–105, (ನಿಯರ್ ಕಲ್ಪತರು ಅಪಾರ್ಟ್‌ಮೆಂಟ್ಸ್), 5ನೇ ಮುಖ್ಯರಸ್ತೆ, 7ನೇ ಕ್ರಾಸ್, ಕತ್ರಿಗುಪ್ಪೆ, ಗ್ರಾಮಠಾಣಾ, ಬೆಂಗಳೂರು–85, ಫೋ–26794606 |
| 2 | ಶ್ರೀ ಮಾಯಕಾರ ಅಸ್ಟ್ರೋಲಜಿ ರಿಸರ್ಚ್ ಸೆಂಟರ್, (ಶ್ರೀ ಮಾಯಕಾರ ಚಾರಿಟಬಲ್ ಟ್ರಸ್ಟ್(ರಿ) | ನಂ–4105, 2ನೇ ಕ್ರಾಸ್, 11ನೇ ಮೇನ್, 'ಎಚ್' ಬ್ಲಾಕ್, ಕನಕದಾಸನಗರ, ದತ್ತಗಲ್ಲಿ 3ನೇ ಸ್ಟೇಜ್, ಮೈಸೂರು ಫೋನ್: 9945415341, 7411161111 |
| 3 | ಭಾರತೀಯ ಜ್ಯೋತಿಷ್ಯ ವಿದ್ಯಾಕೇಂದ್ರ | ಸುಮುಖ, 345, ಸಿ ಮುಖ್ಯರಸ್ತೆ, ಮಾರುತಿ ಲೇಔಟ್, ವಸಂತಪುರ ಹತ್ತಿರ, ಬೆಂಗಳೂರು–61 ಫೊ–080–26667728, 9844296992 |
| 4 | ಕಲ್ಪದ್ರುಮ ಜ್ಯೋತಿಷ್ಯ ಕೇಂದ್ರ ಕಲ್ಪದ್ರುಮ ಶ್ರೀ ಚಾರಿಟಬಲ್ ಟ್ರಸ್ಟ್ | ನಂ–533, 6ನೇ ಕ್ರಾಸ್, ಬೊಗಾದಿ 2ನೇ ಹಂತ, ಮೈಸೂರು–26 ಫೋ–9740973224 |
| 5 | ಜ್ಞಾನ ಸರಸ್ವತಿ ಜ್ಯೋತಿಷ್ಯ ಪಾಠಶಾಲಾ | ನಂ–415, ವಿದ್ಯಾಪೀಠ ಬಡಾವಣೆ, ತ್ಯಾಗರಾಜ ನಗರ, ಬೆಂಗಳೂರು–28, ಫೋ -944902365 |
| 6 | ಜ್ಯೋತ್ಸ್ನಾ ಚಾರಿಟಬಲ್ ಟ್ರಸ್ಟ್ | 1563, ಈಸ್ಟ್ ಎಂಡ್ ರಸ್ತೆ, 9ನೇ ಬ್ಲಾಕ್, ಜಯನಗರ್,ಬೆಂಗಳೂರು–69, ಫೊ–26655577 |
| 7 | ದಿವ್ಯ ಜ್ಯೋತಿ ಕಾಲೇಜ್ ಆಫ್ ಅಸ್ಟ್ರೋಲಜಿ (ಮೈಸೂರು ಬ್ರಾಂಚ್) | ಗೋಪಾಲ ಸ್ವಾಮಿ ಶಿಶುವಿಹಾರ ಮತ್ತು ಪ್ರಿಯುನಿವರ್ಸಿಟಿ ಇಂಡಿಪೆಂಡೆಂಟ್ ಕಾಲೇಜ್ ನ್ಯೂ ನಂಜು ಮಳಿಗೆ, ಲಕ್ಷ್ಮೀಪುರಂ, ಮೈಸೂರು–04, ಫೊ–9916913174 |
| 8 | ಅಖಿಲ ಕರ್ನಾಟಕ ಜ್ಯೋತಿರ್ವಿಜ್ಞಾನ ಸಂಶೋಧನಾ ಸಂಸ್ಥೆ (ರಿ) | ತಾಡಪತ್ರಿ ಗಲ್ಲಿ, ಹುಬ್ಬಳ್ಳಿ–580028, 9448103484 |
| 9 | ವಿಶ್ವವಿಜಯ ಜ್ಯೋತಿಷ್ಯ ವಿದ್ಯಾಲಯ (ರಿ) (ಅಸ್ಟ್ರೋಲಾಜಿಕಲ್ ಎಜುಕೇಷನ್ ಎಂಡ್ ರಿಸರ್ಚ್ ಸೆಂಟರ್) | 54/471, ಲಕ್ಷ್ಮೀ ಟಾಕೀಸ್ ಹತ್ತಿರ, ಎಸ್.ಆರ್.ಕಾಲೋನಿ, ಆನೇಕಲ್ ಟೌನ್ –562106 ಫೊ.ಬಾಲಕೃಷ್ಣ–9243442354, 9986645921 |
| 10 | ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನ (ರಿ) | ನ–361, ಮೊದಲನೇ ಮಹಡಿ, ದೀಕ್ಷಿತ ರಸ್ತೆ, ಕೆ.ಬಿ ಬಡಾವಣೆ, ದಾವಣಗೆರೆ–577002, ಟಿ.ಬಿ. ಗುರುನಂಜಯ್ಯ–9844896916 |
| 11 | ಬೆಂಗಳೂರು ಅಸ್ಟ್ರೋಲಾಜಿಕಲ್ ಅಸೀಸಿಯೇಷನ್ (ರಿ) | ಕೇ/ಆಫ್ ಶ್ರೀ ಶಿವಶಂಕರ ಟೆಂಪಲ್, ನಂ–02, ಡಿ.ವಿ.ಜಿ ರಸ್ತೆ, ಬಸವನ ಗುಡಿ, ಬೆಂಗಳೂರು–04 |
| 12 | ದಿವ್ಯಜ್ಯೋತಿ ಕಾಲೇಜ್ ಆಫ್ ಅಸ್ಟ್ರೋಲಜಿ | ನಂ–52, 6ನೇ ಮೈನ್, ಟಾಟಾ ಸಿಲ್ಕ್ ಫಾರ್ಮ್, ಬೆಂಗಳೂರು–70 |
| 13 | ಹಿಮಾಲಯ ಯೋಗ ಫೌಂಡೇಷನ್ (ರಿ) | # 136/1 ಶ್ರೀ ನೀಲಕಂಠೇಶ್ವರ ಮಠ, ಗನ್ ಹೌಸ್ ಹತ್ತಿರ್, ಹರಿಶ್ಚಂದ್ರ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು–04, 9845138544 |

| | | |
|---|---|---|
| 14 | ಶ್ರೀ ಹರ್ಷ ಜ್ಯೋತಿಷ್ಯಾಲಯ ಟ್ರಸ್ಟ್ (ರಿ) | ನಂ-3110/1 ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರ, ಕಾರಹಳ್ಳಿ ಸರ್ಕಲ್, ಬಂಗಾರ ಪೇಟೆ, ಕೋಲಾರ (ಜಿ), ಫೋ: 9448785062, 9449772235 |
| 15 | ಶ್ರೀ ಜ್ಞಾನಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ವೇದಿಕ್ ಆಸ್ಟ್ರೋಲಜಿ ಟ್ರಸ್ಟ್ (ರಿ) | # 315, 2ನೇ ಮುಖ್ಯ ರಸ್ತೆ, 6ನೇ ಕ್ರಾಸ್, ಪಂಚಶೀಲ ನಗರ, ಮೂಡಲ ಪಾಳ್ಯ, ನಾಗರ ಭಾವಿ ಮುಖ್ಯ ರಸ್ತೆ, ಬೆಂಗಳೂರು-72 ಫೋ : |
| 16 | ಕರ್ನಾಟಕ ಜ್ಯೋತಿಷ್ಯ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ | ನಂ-59, 1ನೇ 'ಬಿ' ಮುಖ್ಯರಸ್ತೆ, ಸುಧಾಮ ನಗರ, ಲಾಲ್ ಭಾಗ್ ರೋಡ್ ಕ್ರಾಸ್, ಬೆಂಗಳೂರು-27, ದೂ-22279208 |
| 17 | ಶ್ರೀ ಗಜಾನನ ಸಂಸ್ಕೃತ ಕಾಲೇಜು | ಸೂಡಿ-582211, ರೋಣ (ತಾ), ಗದಗ (ಜಿ) |
| 18 | ಶ್ರೀ ಪರಾಶರ ಆಸ್ಟ್ರೋ ಸೆಂಟರ್ ಫಾರ್ ಎಜುಕೇಷನ್ (ರಿ) | 424-ಎ, 1ನೇ ಕ್ರಾಸ್, 3ನೇ ಮೈನ್, ಎಮ್.ಕೆ.ಎಕ್ಸ್ಟೆನ್ಷನ್, ಬೆಂಗಳೂರು-560054, ದೂ-23601586, 9986031083, 9880958075 |
| 19 | ಶ್ರೀ ಶಿವಯ್ಯ ಶಾಸ್ತ್ರಿ ಜಿ.ಎಸ್<br>ಶ್ರೀ ಶಿವಶಕ್ತಿ ಜ್ಯೋತಿಷ್ಯ ವಿದ್ಯಾ ಕೇಂದ್ರ | ಶ್ರೀ ಶಿವಯ್ಯ ಶಾಸ್ತ್ರಿ ಜಿ.ಎಸ್, ಕೇ/ಆಫ್ ಈರಮ್ಮ, w/o ಮುದ್ದಯ್ಯ ಬಿಲ್ಡಿ, ಸರಕಾರಿ ಶಾಲೆ ಎದುರು, ದೊಡ್ಡ ಗೊಲ್ಲರಪಟ್ಟಿ, ನಾಗದೇವನ ಹಳ್ಳಿ, ಜ್ಞಾನಭಾರತಿ (ಪೊ), ಬೆಂಗಳೂರು-56, ಫೋ-9845046684 |
| 20 | ಜ್ಞಾನ ಜ್ಯೋತಿ ಜ್ಯೋತಿಷ್ಯ ವಿದ್ಯಾಕೇಂದ್ರ | # 193, ಶಾರದಾ ಸದನ, 3ನೇ ಕ್ರಾಸ್, ಕ್ಯಾಶಿಯರ್ ಲೇಔಟ್, ತಾವರೆ ಕೆರೆ, ಬಿಟಿಎಂ 1ನೇ ಹಂತ, ಬೆಂಗಳೂರು-29, 26845122 |
| 21 | ಆದಿತ್ಯ ವೇದಿಕ್ ಅಕಾಡೆಮಿ | ಶ್ರೀ ರಾಘವೇಂದ್ರ ಸ್ವಾಮಿ ಮಠ ಕಾಂಪ್ಲೆಕ್ಸ್, ದಾಮೋದರ ಮೊದಲಿಯಾರ್ ಸ್ಟ್ರೀಟ್, ಹಲಸೂರು, ಬೆಂಗಳೂರು-08, 9844178723 |
| 22 | ಶ್ರೀ ಗುರು ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಲಜಿ | ನಂ-1/61, attivatta village, ದಾಸರ ಹಳ್ಳಿ, ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ (ಜಿ)-562114, 9632425454, 9035444757, 9141807969 |
| 23 | ಸ್ವಡಿ ಸೆಂಟರ್ ಫಾರ್ ಆಸ್ಟಿಕ್ ಎಂಡ್ ಪ್ರೊಫೆಟಿಕ್ ಎಜುಕೇಷನ್ (ರಿ), ಆಸ್ಟ್ರೋಲಾಜಿಕಲ್ ರಿಸರ್ಚ್ ಎಂಡ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ | ನಂ-53, 'ಅಮೃತ', 1ನೇ ಮೈನ್, 10ನೇ ಕ್ರಾಸ್, 1ನೇ ಬ್ಲಾಕ್, ತ್ಯಾಗರಾಜ ನಗರ, ಎನ್.ಆರ್.ಕಾಲೋನಿ, ರಾಮಮಂದಿರ, ಬೆಂಗಳೂರು-560028 |
| 24 | ಭಾರತೀಯ ಜ್ಯೋತಿಷ್ಯ ಸಂಸ್ಥಾನ | # 5, 3ನೇ ಕ್ರಾಸ್, 4ನೇ ಬ್ಲಾಕ್, ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು-20, 23562241 |
| 25 | ಶ್ರೀ ಚನ್ನವೀರಚೇತ ಮರುಳ ಸಿದ್ಧಸ್ವಾಮಿ ಶಿಕ್ಷಣ ಪ್ರತಿಷ್ಠಾನ | ಚೌಳ ಹಿರಿಯೂರು ಹಿರೇಮಠದ ಪರಂಪರಾಗತ ವೀರಾಪುರ ಹಿರೇಮಠ ನೀಚಡಿ ಅಂಚೆ, ಸಾಗರ (ತಾ), ಶಿವಮೊಗ್ಗ (ಜಿ) |
| 26 | ಜ್ಞಾನ ವಾಹಿನಿ ಪ್ರತಿಷ್ಠಾನ (ರಿ) | # 509, 14ನೇ ಮೈನ್, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು-96, ಫೋ: 080-23496, 9448366468 |
| 27 | ಶುಭಂ ಎಸ್ಟ್ರೋಲಾಜಿಕಲ್ ಎಜ್ಯುಕೇಶನ್ ಸೊಸೈಟಿ (ರಿ) | ಶುಭಂ ಎಸ್ಟ್ರೋಲಾಜಿಕಲ್ ಎಜ್ಯುಕೇಶನ್ ಸೊಸೈಟಿ(ರಿ), ರಾಮದೇವ ಗಲ್ಲಿ, ಶ್ರೀರಾಮ ಕಾಂಪ್ಲೆಕ್ಸ್-ಮಳಿಗೆ ಸಂಖ್ಯೆ-7, ಬೆಳಗಾಂವ, ಜಿ-ಬೆಳಗಾಂವ, ಫೋ-9611406951 |
| 28 | ವಿನಾಯಕ ಎಸ್ಟ್ರೋಲಾಜಿ ಶಿಕ್ಷಣ ಸಂಸ್ಥೆ. | ಡಿ.ವಿ. ಮಾರ್ಕೆಟ್ ರಸ್ತೆ, 22ನೇ ವಾರ್ಡ, ಹೊಸಪೇಟೆ-583201, ಫೋ-9482053437 |

ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಸಂಬಂಧಿಸಿದ ಪಾಠ್ಯಕ್ರಮವನ್ನು ಸಿದ್ಧಪಡಿಸಲು 'ಅಧ್ಯಯನ ಮಂಡಳಿ'ಯನ್ನು ರಚಿಸಲಾಗಿತ್ತು. ಈ ಅಧ್ಯಯನ ಮಂಡಳಿಯು ಸಿದ್ಧಪಡಿಸಿರುವ ನೂತನ ಪಾಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಜ್ಯೋತಿಷ್ಯ ಸಂಸ್ಥೆಗಳ ಪಟ್ಟಿಯನ್ನು ವಿವರವಾಗಿ ಪರಿಶೀಲಿಸಿತು. ವಿಶ್ವವಿದ್ಯಾಲಯದ ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ನಡೆಸಲು ಈ ಸಂಸ್ಥೆಗಳಿಗೆ ಮಾನ್ಯತೆ ನೀಡಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು. ಈ ಕೋರ್ಸ್‌ಗಳಿಗೆ ಅಧ್ಯಯನ ಮಂಡಳಿಯು ಸಿದ್ಧಪಡಿಸಿರುವ ನೂತನ ಪಾಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಸಭೆಯು ಅನುಮತಿ ನೀಡಿತು.**

**ವಿಷಯ 5: ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ತರಗತಿಗಳಿಗೆ 2014-15ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಷ್ಠಾನಗೊಳಿಸುವ ಬಗೆಗೆ.**

ಟಿಪ್ಪಣಿ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ವೇಳಾಪಟ್ಟಿಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡಿ 534 ಯುಆರ್‌ಸಿ 2013, ದಿನಾಂಕ: 05.11.2013 ಹಾಗೂ ಪತ್ರ ಸಂಖ್ಯೆ: ಕೆ.ಎಸ್.ಎಚ್.ಸಿ.ಇ.ಸಿ./ ಯೂನಿಫಾರ್ಮ ಕ್ಯಾಲೆಂಡರ್/2013-14/219, ದಿನಾಂಕ: 07.12.2013ರಲ್ಲಿ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ವೇಳಾಪಟ್ಟಿಯನ್ನು ರೂಪಿಸುವಂತೆ ಸೂಚಿಸಲಾಗಿತ್ತು. ದಿನಾಂಕ: 03.03.2014ರಂದು ನಡೆದ ಪ್ರಶಾಸನ ಸಮಿತಿಯ 20ನೇ ಸಭೆಯ ವಿಷಯ ಸಂಖ್ಯೆ-7ರ ನಿರ್ಣಯದಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಈ ವೇಳಾಪಟ್ಟಿಯನ್ನು 2014-15ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ತರಗತಿಗಳಿಗೆ ೨೦೧೪-೧೫ನೇ ಸಾಲಿನ ಏಕರೂಪದ ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಷ್ಠಾನಗೊಳಿಸಲು ಸಭೆಯು ಒಪ್ಪಿಗೆ ನೀಡಿತು.**

**ವಿಷಯ 6:** **ಭಾರತ ಸರ್ಕಾರವು ರಚಿಸಿರುವ 2ನೇ ಸಂಸ್ಕೃತ ಆಯೋಗದ ಯೋಜನೆಗಳು ಹಾಗೂ 'ಸಂಸ್ಕೃತ ಸಾಹಿತ್ಯ ಮತ್ತು ಮಹಿಳೆ' ವಿಷಯದ ಬಗೆಗೆ 2014-15ನೇ ಸಾಲಿನಲ್ಲಿ ವಿಚಾರ ಸಂಕಿರಣಗಳನ್ನು ಆಯೋಜಿಸುವ ಬಗೆಗೆ.**

ಟಿಪ್ಪಣಿ: ಭಾರತ ಸರ್ಕಾರವು 2ನೇ ಸಂಸ್ಕೃತ ಆಯೋಗವನ್ನು ರಚಿಸಿದ್ದು, ಪ್ರೊ. ಸತ್ಯವ್ರತ ಶಾಸ್ತ್ರಿ ಅವರನ್ನು ಈ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದೆ. ವಿಶ್ವವಿದ್ಯಾಲಯದ ತೃತೀಯ ದೀಕ್ಷಾಂತ ಘಟಿಕೋತ್ಸವದಲ್ಲಿ ಸಾರಸ್ವತ ಅತಿಥಿಗಳಾಗಿ ಭಾಗವಹಿಸಿದ್ದ ಪ್ರೊ. ವಾದಿರಾಜ ಪಂಚಮುಖಿ ಅವರು 2ನೇ ಸಂಸ್ಕೃತ ಆಯೋಗದ ಯೋಜನೆಗಳ ಬಗೆಗೆ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸುವಂತೆ ಸಲಹೆ ನೀಡಿದ್ದಾರೆ. ಅಲ್ಲದೆ, "ಸಂಸ್ಕೃತ ಸಾಹಿತ್ಯ ಮತ್ತು ಮಹಿಳೆ" ವಿಷಯದ ಬಗೆಗೆ ವಿಚಾರ ಸಂಕಿರಣವನ್ನು ಕೂಡ ಆಯೋಜಿಸಬೇಕಿದೆ. 2014-15ನೇ ಸಾಲಿನಲ್ಲಿ ತಲಾ 1.00 ಲಕ್ಷ ರೂಪಾಯಿಗಳ ಮೊತ್ತದಲ್ಲಿ ಈ ಎರಡು ವಿಚಾರ ಸಂಕಿರಣಗಳನ್ನು ಆಯೋಜಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದ ವತಿಯಿಂದ ನಡೆಸುವ ಈ ವಿಚಾರ ಸಂಕಿರಣಗಳಿಗೆ ಹಾಗೂ ಅದಕ್ಕೆ ತಗಲುವ ವೆಚ್ಚಕ್ಕೆ ಸಭೆಯು ಅನುಮೋದನೆ ನೀಡಿತು.**

**ವಿಷಯ 7:** **2014-15ನೇ ಸಾಲಿನಿಂದ ಸಂಸ್ಕೃತ ಕಾಲೇಜುಗಳಿಗೆ ಪಾರಂಪರಿಕ ಅನಧ್ಯಯನ ರಜಾ ಕ್ರಮವನ್ನು ಅನುಸರಿಸಲು ಅನುಮತಿ ನೀಡುವ ಕುರಿತು.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ಹಿಂದಿನಿಂದ ಜಾರಿಯಲ್ಲಿದ್ದ ಅನಧ್ಯಯನ ಪದ್ಧತಿಯನ್ನು ಮುಂದುವರೆಸುವಂತೆ ಕೋರಿ ಸರ್ಕಾರಕ್ಕೆ ಪತ್ರವನ್ನು ಸಲ್ಲಿಸಿದ್ದು ದಿನಾಂಕ 01.03.2014ರಂದು ಸರ್ಕಾರದಿಂದ ಅನುಮತಿಯು ದೊರೆತಿರುತ್ತದೆ. 2014-15ನೇ ಶೈಕ್ಷಣಿಕ ವರ್ಷದಿಂದ ಅನಧ್ಯಯನ ಪದ್ಧತಿಯು ಜಾರಿಗೆ ಬರುವಂತೆ ಕೋರಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **೨೦೧೪-೧೫ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದ ಅಧೀನದ ಸಂಯೋಜಿತ ಕಾಲೇಜುಗಳಲ್ಲಿ ವೇದಾಧ್ಯಯನಕ್ಕೆ ಅನುಕೂಲವಾಗುವಂತೆ ಆಯಾ ಆಡಳಿತ ಮಂಡಳಿಯ ವಿವೇಚನೆಯ ಮೇರೆಗೆ ಪಾರಂಪರಿಕ ಅನಧ್ಯಯನ ಪದ್ಧತಿಯನ್ನು ಜಾರಿಗೊಳಿಸಬಹುದು. ಘಟಕ ಕಾಲೇಜುಗಳಲ್ಲಿ ಅನಧ್ಯಯನ ರಜೆಗೆ ಸಂಬಂಧಿಸಿದಂತೆ ಕುಲಸಚಿವರ ಅಧ್ಯಕ್ಷತೆಯ ಸಮಿತಿಯು ಸಭೆ ಸೇರಿ ನಿರ್ಣಯ ತೆಗೆದುಕೊಳ್ಳಬಹುದೆಂದು ಸಭೆಯು ಸೂಚಿಸಿತು.**

**ವಿಷಯ 8:** **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. (ವಿದ್ಯಾವಾರಿಧಿ) ಪದವಿಗಾಗಿ ಮಾರ್ಗದರ್ಶನ ಮಾಡಲು ಅರ್ಹರಾದ ಅಧ್ಯಾಪಕರ ಪಟ್ಟಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ (ವಿದ್ಯಾವಾರಿಧಿ) ಪದವಿಗಾಗಿ ಸಂಶೋಧನೆಯನ್ನು ಕೈಗೊಂಡಿರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲು ಅರ್ಹರಾದ ವಿಶ್ವವಿದ್ಯಾಲಯದ ಘಟಕ ಹಾಗೂ ಸಂಯೋಜಿತ ಕಾಲೇಜುಗಳ ಅಧ್ಯಾಪಕ ವೃಂದ ಹಾಗೂ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿರುವ ಸಂಶೋಧನಾ ಕೇಂದ್ರಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಪಟ್ಟಿಯನ್ನು ಪರಿಶೀಲಿಸಿ ಸಭೆಯ ಅನುಮೋದನೆಗೆ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಪಿಎಚ್.ಡಿ. (ವಿದ್ಯಾವಾರಿಧಿ) ಪದವಿಯ ಅರ್ಹ ಮಾರ್ಗದರ್ಶಕರು ಹಾಗೂ ಸಹ ಮಾರ್ಗದರ್ಶಕರ ಪಟ್ಟಿಯನ್ನು ಪರಿಶೀಲಿಸಿ ಸಭೆಯು ಅನುಮೋದಿಸಿತು. ಈ ಕೆಳಕಂಡ ಅಧ್ಯಾಪಕರು ಮಾರ್ಗದರ್ಶಕರಾಗಿರಲು ಅರ್ಹರಾಗಿರುತ್ತಾರೆ.**

| ಕ್ರ ಸಂ. | ಹೆಸರು ಮತ್ತು ಹುದ್ದೆ | ವಿಶೇಷಾಧ್ಯಯನ ಕ್ಷೇತ್ರಗಳು | ಮಾರ್ಗದರ್ಶಕರು/ ಸಹ ಮಾರ್ಗದರ್ಶಕರು |
|---|---|---|---|
| 1 | ಪ್ರೊ. ಶ್ರೀನಿವಾಸ ವರಖೇಡಿ<br>ಅಧ್ಯಕ್ಷರು ಮತ್ತು ಪ್ರಾಧ್ಯಾಪಕರು, ಶಾಸ್ತ್ರನಿಕಾಯ, ಕ.ಸಂ.ವಿ | ನ್ಯಾಯ, ವೇದಾಂತ, ದರ್ಶನ, ಸಂಗಣಕ ಭಾಷಾವಿಜ್ಞಾನ, ಭಾಷಾಶಾಸ್ತ್ರ, ಸಂಸ್ಕೃತ ಸಾಹಿತ್ಯ ವಿಮರ್ಶೆ ಮತ್ತು ಇತಿಹಾಸ, ಇತರ ಅಂತಃಶಾಸ್ತ್ರೀಯ ಅಧ್ಯಯನ ಕ್ಷೇತ್ರಗಳು | ಮಾರ್ಗದರ್ಶಕರು |
| 2 | ಪ್ರೊ. ಗಿರೀಶ್ ಚಂದ್ರ<br>ಅಧ್ಯಕ್ಷರು ಮತ್ತು ಪ್ರಾಧ್ಯಾಪಕರು, ಭಾಷಾನಿಕಾಯ, ಕ.ಸಂ.ವಿ | ಭಾಷೆ ಮತ್ತು ಸಾಹಿತ್ಯ, ಅಲಂಕಾರಶಾಸ್ತ್ರ, ಗ್ರಂಥಸಂಪಾದನಾಶಾಸ್ತ್ರ | ಮಾರ್ಗದರ್ಶಕರು |
| 3 | ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ<br>ಸಹ ಪ್ರಾಧ್ಯಾಪಕರು, ವೇದಾಂತನಿಕಾಯ, ಕ.ಸಂ.ವಿ | ದ್ವೈತವೇದಾಂತ, ನ್ಯಾಯ | ಮಾರ್ಗದರ್ಶಕರು |
| 4 | ಡಾ. ಬಿ.ವಿ. ವೆಂಕಟರಮಣ<br>ಸಹ ಪ್ರಾಧ್ಯಾಪಕರು, ವೇದಾಂತನಿಕಾಯ, ಕ.ಸಂ.ವಿ | ವ್ಯಾಕರಣ, ನ್ಯಾಯ, ದ್ವೈತ ಮತ್ತು ಅದ್ವೈತವೇದಾಂತ | ಮಾರ್ಗದರ್ಶಕರು |
| 5 | ಡಾ. ವಿನಯ್. ಪಿ<br>ಸಹಾಯಕ ಪ್ರಾಧ್ಯಾಪಕರು, ವೇದಾಂತನಿಕಾಯ, ಕ.ಸಂ.ವಿ | ದ್ವೈತ ಮತ್ತು ಅದ್ವೈತವೇದಾಂತ, ನ್ಯಾಯ | ಮಾರ್ಗದರ್ಶಕರು |
| 6 | ಡಾ. ಶರತ್ ಚಂದ್ರ ಸ್ವಾಮಿ<br>ಸಹಾಯಕ ಪ್ರಾಧ್ಯಾಪಕರು, ವೇದಾಂತನಿಕಾಯ, ಕ.ಸಂ.ವಿ | ಶಕ್ತಿವಿಶಿಷ್ಟಾದ್ವೈತವೇದಾಂತ, ಶೈವದರ್ಶನ, ಶೈವಾಗಮ, ಬೌದ್ಧದರ್ಶನ, ಗ್ರಂಥಸಂಪಾದನಾ ಶಾಸ್ತ್ರ | ಮಾರ್ಗದರ್ಶಕರು |
| 7 | ಡಾ. ಮಂಜುನಾಥ ಭಟ್<br>ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ, ಕ.ಸಂ.ವಿ | ಮೀಮಾಂಸಾಶಾಸ್ತ್ರ, ಅದ್ವೈತವೇದಾಂತ | ಮಾರ್ಗದರ್ಶಕರು |
| 8 | ಡಾ. ವಿನಾಯಕ ನಾಮಣ್ಣವರ<br>ಸಹಾಯಕ ಪ್ರಾಧ್ಯಾಪಕರು, ಭಾಷಾನಿಕಾಯ, ಕ.ಸಂ.ವಿ | ಭಾಷೆ ಮತ್ತು ಸಾಹಿತ್ಯ, ಅಲಂಕಾರಶಾಸ್ತ್ರ, ಗ್ರಂಥಸಂಪಾದನಾಶಾಸ್ತ್ರ | ಮಾರ್ಗದರ್ಶಕರು |

| | | | |
|---|---|---|---|
| 9 | ಡಾ. ಕೃಷ್ಣ ಜೋಶಿ<br>ಸಹಾಯಕ ಪ್ರಾಧ್ಯಾಪಕರು, ಭಾಷಾನಿಕಾಯ, ಕ.ಸಂ.ವಿ | ಭಾಷೆ ಮತ್ತು ಸಾಹಿತ್ಯ, ಅಲಂಕಾರಶಾಸ್ತ್ರ, ಪ್ರಾಕೃತ | ಮಾರ್ಗದರ್ಶಕರು |
| 10 | ಡಾ. ಲಕ್ಷ್ಮೀನಾರಾಯಣ ಭಟ್ಟ<br>ಪ್ರಾಧ್ಯಾಪಕರು, ಎಸ್.ಎಂ.ಎಸ್.ಪಿ ಕಾಲೇಜು, ಉಡುಪಿ | ಅಲಂಕಾರಶಾಸ್ತ್ರ, ವ್ಯಾಕರಣ, ಸಾಂಖ್ಯ ಮತ್ತು ಯೋಗ | ಮಾರ್ಗದರ್ಶಕರು |
| 11 | ಡಾ. ಸುರೇಶ್ ಹೆಚ್.ಕೆ<br>ಪ್ರಾಂಶುಪಾಲರು, ಎಸ್.ಎಂ.ಎಸ್.ಪಿ ಕಾಲೇಜು, ಉಡುಪಿ | ಅಲಂಕಾರಶಾಸ್ತ್ರ, ವೇದಾಂತ | ಮಾರ್ಗದರ್ಶಕರು |
| 12 | ಡಾ. ಎಸ್.ಎನ್. ಸಂಪತ್ಕುಮಾರ್<br>ಪ್ರಾಂಶುಪಾಲರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು | ವಿಶಿಷ್ಟಾದ್ವೈತವೇದಾಂತ | ಮಾರ್ಗದರ್ಶಕರು |
| 13 | ಡಾ. ಕೆ.ಎಂ. ಮಹದೇವಯ್ಯ<br>ಪ್ರಾಧ್ಯಾಪಕರು, ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು | ಶಕ್ತಿವಿಶಿಷ್ಟಾದ್ವೈತವೇದಾಂತ | ಮಾರ್ಗದರ್ಶಕರು |
| 14 | ಡಾ. ಎಂ.ಎ. ಆಳ್ವಾರ್<br>ಸಹಾಯಕ ಪ್ರಾಧ್ಯಾಪಕರು, ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು | ನವೀನನ್ಯಾಯ, ಆಯುರ್ವೇದ ವಿಶಿಷ್ಟಾದ್ವೈತವೇದಾಂತ, ಹಸ್ತಪ್ರತಿಶಾಸ್ತ್ರ | ಮಾರ್ಗದರ್ಶಕರು |
| 15 | ಡಾ. ಪ್ರಭುಲಿಂಗ ಹೆಬ್ಬಾಳ<br>ಸಹಾಯಕ ಪ್ರಾಧ್ಯಾಪಕರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು | ವ್ಯಾಕರಣಶಾಸ್ತ್ರ | ಮಾರ್ಗದರ್ಶಕರು |
| 16 | ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ<br>ನಿರ್ದೇಶಕರು, ವಿದ್ಯಾಧೀಶ ಸ್ನಾತಕೋತ್ತರ ಸಂಸ್ಕೃತ ಶೋಧಕೇಂದ್ರ, ಬೆಂಗಳೂರು | ದ್ವೈತವೇದಾಂತ | ಮಾರ್ಗದರ್ಶಕರು |
| 17 | ಡಾ. ಶಿವಪ್ರಸಾದ್<br>ಸಹಾಯಕ ಪ್ರಾಧ್ಯಾಪಕರು, ಎಸ್.ಎಂ.ಎಸ್.ಪಿ ಸಂಸ್ಕೃತ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಉಡುಪಿ | ಜ್ಯೋತಿಷಶಾಸ್ತ್ರ, ವಾತುಲಾಗಮ | ಮಾರ್ಗದರ್ಶಕರು |
| 18 | ಡಾ. ಕೃಷ್ಣಾಚಾರ್ಯ ಉಪಾಧ್ಯಾಯ<br>ಉಪನಿರ್ದೇಶಕರು, ವಿದ್ಯಾಧೀಶ ಸ್ನಾತಕೋತ್ತರ ಸಂಸ್ಕೃತ ಶೋಧಕೇಂದ್ರ, ಬೆಂಗಳೂರು | ದ್ವೈತವೇದಾಂತ, ಹಸ್ತಪ್ರತಿಶಾಸ್ತ್ರ | ಸಹ ಮಾರ್ಗದರ್ಶಕರು |
| 19 | ಡಾ. ವಾದಿರಾಜಾಚಾರ್ಯ<br>ಉಪನಿರ್ದೇಶಕರು, ವಿದ್ಯಾಧೀಶ ಸ್ನಾತಕೋತ್ತರ ಸಂಸ್ಕೃತ ಶೋಧಕೇಂದ್ರ, ಬೆಂಗಳೂರು | ದ್ವೈತವೇದಾಂತ, ಹಸ್ತಪ್ರತಿಶಾಸ್ತ್ರ | ಸಹ ಮಾರ್ಗದರ್ಶಕರು |
| 20 | ಡಾ. ರಮೇಶ ಟಿ.ಎಸ್.<br>ಅತಿಥಿ ಉಪನ್ಯಾಸಕರು, ವಾದಿರಾಜ ಸಂಶೋಧನ ಕೇಂದ್ರ, ಉಡುಪಿ | ದ್ವೈತವೇದಾಂತ | ಸಹ ಮಾರ್ಗದರ್ಶಕರು |
| 21 | ಡಾ. ಎಂ. ಜಯರಾಮನ್<br>Adjunct Faculty, ವೇದವಿಜ್ಞಾನ ಶೋಧ ಸಂಸ್ಥಾನಮ್, ಚನ್ನೇನಹಳ್ಳಿ | ಯೋಗಶಾಸ್ತ್ರ, ವೇದಾಂತ | ಸಹ ಮಾರ್ಗದರ್ಶಕರು |
| 22 | ಡಾ. ವಿನಯಚಂದ್ರ ಬಿ.ಕೆ.<br>Adjunct Faculty, ವೇದವಿಜ್ಞಾನ ಶೋಧ ಸಂಸ್ಥಾನಮ್, ಚನ್ನೇನಹಳ್ಳಿ | ಯೋಗಶಾಸ್ತ್ರ, ಭಾರತೀಯ ಮನಶ್ಶಾಸ್ತ್ರ, ಭಾರತೀಯ ಸಂಸ್ಕೃತಿ ಮತ್ತು ಇತಿಹಾಸ | ಸಹ ಮಾರ್ಗದರ್ಶಕರು |
| 23 | ಡಾ. ಅನುರಾಧಾ ಚೌಧರಿ<br>Adjunct Faculty, ವೇದವಿಜ್ಞಾನ ಶೋಧ ಸಂಸ್ಥಾನಮ್, ಚನ್ನೇನಹಳ್ಳಿ | ಯೋಗಶಾಸ್ತ್ರ, ಭಾರತೀಯ ಮನಶ್ಶಾಸ್ತ್ರ, ಭಾರತೀಯ ಸಂಸ್ಕೃತಿ ಮತ್ತು ಇತಿಹಾಸ | ಸಹ ಮಾರ್ಗದರ್ಶಕರು |

**ವಿಷಯ 9: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಂದ ಪಾಠಶಾಲೆಗಳನ್ನು ಪ್ರತ್ಯೇಕಗೊಳಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಾದ ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ ಸಿ.ಎಲ್.ವೈ. ಸಂಸ್ಕೃತ ಕಾಲೇಜು, ಧಾರವಾಡ, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ, ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಸಿದ್ಧಗಂಗಾ ಮಠ, ತುಮಕೂರು; ಮತ್ತು ಶ್ರೀ ಕಾಲಭೈರವೇಶ್ವರ ವೇದಾಗಮ ಸಂಸ್ಕೃತ ಕಾಲೇಜು, ಆದಿಚುಂಚನಗಿರಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು, ಮಠದೇವಳ, ಸ್ವರ್ಣವಲ್ಲೀ, ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುರಕಟ್ಟೆ, ಹೊನ್ನಾವರ, ಶ್ರೀಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ – ಈ ಕಾಲೇಜುಗಳಿಂದ ಈ ಕೆಳಕಂಡ ಪಾಠಶಾಲೆಗಳನ್ನು ಬೇರ್ಪಡಿಸಲಾಗಿದ್ದು, ಈ ಪಾಠಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಮುಂದಿನ ಹಿತದೃಷ್ಟಿಯಿಂದ ಪಿಂಚಣಿ ಸೌಲಭ್ಯವನ್ನು ಒದಗಿಸುವ ಸಲುವಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರಸಂ. | ಪಾಠಶಾಲೆಯ ಹೆಸರು |
|---|---|
| 1 | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಪಾಠಶಾಲೆ, ಜಮಖಂಡಿ |
| 2 | ಸಿ.ಎಲ್.ವೈ. ಸಂಸ್ಕೃತ ಪಾಠಶಾಲೆ, ಕುಮಾರೇಶ್ವರನಗರ, ಧಾರವಾಡ |
| 3 | ಎಸ್.ಎಂ.ಎಸ್.ಪಿ. ಸಂಸ್ಕೃತ ಪಾಠಶಾಲೆ, ಉಡುಪಿ |

| | |
|---|---|
| 4 | ಉದ್ಧಾನೇಶ್ವರ ವೇದ ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ |
| 5 | ಶಿವಕುಮಾರಸ್ವಾಮಿ ವೇದ ಸಂಸ್ಕೃತ ಪಾಠಶಾಲೆ, ಸಿದ್ಧಗಂಗಾ ಮಠ |
| 6 | ಶ್ರೀ ಕಾಲಭೈರವೇಶ್ವರ ಸಂಸ್ಕೃತ ಪಾಠಶಾಲೆ, ಶ್ರೀ ಆದಿಚುಂಚನಗಿರಿ ಕ್ಷೇತ್ರ |
| 7 | ಶ್ರೀ ರಾಜರಾಜೇಶ್ವರಿ ಸಂಸ್ಕೃತ ಪಾಠಶಾಲೆ, ಮಠದೇವಳ, ಸ್ವರ್ಣವಲ್ಲೀ |
| 8 | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಪಾಠಶಾಲೆ, ಬೆಂಗಳೂರು |
| 9 | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಪಾಠಶಾಲೆ, ಸುರಕಟ್ಟೆ, ಹೊನ್ನಾವರ |
| 10 | ಶ್ರೀಮಾತಾ ಸಂಸ್ಕೃತ ಪಾಠಶಾಲೆ, ಉಮ್ಮಚಗಿ |

ನಿರ್ಣಯ: **ಈ ಪಾಠಶಾಲೆಗಳ ಪಟ್ಟಿಯನ್ನು ಪರಿಶೀಲಿಸಿ ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 10: ವಿಶ್ವವಿದ್ಯಾಲಯವು ರೂಪಿಸಿದ ನೂತನ ಅಧ್ಯಯನ ಕ್ರಮಕ್ಕೆ ಅನುಮೋದನೆ ನೀಡುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2014-15ನೇ ಸಾಲಿನಿಂದ ಪ್ರಾರಂಭಿಸುವ ಬಿ.ಎ. ಸಂಸ್ಕೃತ ವಿದ್ವನ್ಮಧ್ಯಮಾ ಹಾಗೂ ಎಂ.ಎ. ಸಂಸ್ಕೃತ ವಿದ್ವದುತ್ತಮಾ 1ನೇ ವರ್ಷದ ತರಗತಿಗಳಿಗಾಗಿ ನೂತನ ಪರಿಷ್ಕೃತ ಪಾಠ್ಯಕ್ರಮವನ್ನು ಆಯಾ ವಿಷಯಗಳ ಅಧ್ಯಯನ ಮಂಡಳಿ ಸಭೆಯಲ್ಲಿ ಈಗಾಗಲೇ ರೂಪಿಸಲಾಗಿದ್ದು, ಈ ಪಾಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯವು ರೂಪಿಸಿ ೨೦೧೪-೧೫ನೇ ಸಾಲಿನಿಂದ ಎಂ.ಎ (ಪ್ರಥಮ) ಮತ್ತು ಬಿ.ಎ. (ಪ್ರಥಮ) ಜಾರಿಗೆ ತರಲು ಬಯಸಿರುವ ನೂತನ ಅಧ್ಯಯನ ಕ್ರಮಕ್ಕೆ ಸಭೆಯು ಸಂತೋಷದಿಂದ ಒಪ್ಪಿಗೆ ಸೂಚಿಸಿತು.**

**ವಿಷಯ 11: ವಿಶ್ವವಿದ್ಯಾಲಯದ ಸಂಜೆ ಕಾಲೇಜಿನ ಪ್ರಾಚಾರ್ಯರು ಹಾಗೂ ಸಿಬ್ಬಂದಿಯನ್ನು ನೇಮಕ ಮಾಡುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2013-14ನೇ ಸಾಲಿನಿಂದ ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸಿದ್ದು, 2014-15ನೇ ಸಾಲಿನ ತರಗತಿಗಳನ್ನು ಪ್ರಾರಂಭಿಸಬೇಕಿದೆ. ಈ ಸಾಲಿನಲ್ಲಿ ಬಿ.ಎ. 1ನೇ ಹಾಗೂ 2ನೇ ವರ್ಷದ ಬೋಧನೆಗಾಗಿ ಮತ್ತು ಆಡಳಿತಾತ್ಮಕ ನಿರ್ವಹಣೆಗಾಗಿ ಪ್ರಾಚಾರ್ಯರು ಹಾಗೂ ಬೋಧಕ ಸಿಬ್ಬಂದಿಗಳನ್ನು ನೇಮಿಸುವ ಆವಶ್ಯಕತೆ ಇದ್ದು, ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಸಂಸ್ಕೃತ ಸಂಜೆ ಕಾಲೇಜಿನ ಪ್ರಾಚಾರ್ಯರಾಗಿ ಡಾ. ವೀರನಾರಾಯಣ ಎನ್.ಕೆ.ಪಾಂಡುರಂಗಿ, ಇವರು ಕಾರ್ಯನಿರ್ವಹಿಸುತ್ತಿದ್ದು, ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಾದ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರನ್ನು ಸಂಜೆ ಕಾಲೇಜಿಗೆ ನಿಯೋಜಿಸಿರುವುದನ್ನು ಅನುಮೋದಿಸಿದೆ. ಅಗತ್ಯವಿದ್ದಲ್ಲಿ ಇತರ ಸಹಾಯಕ ಪ್ರಾಧ್ಯಾಪಕರ ಸೇವೆಯನ್ನು ಬಳಸಿಕೊಳ್ಳಬಹುದು ಎಂದು ಸೂಚಿಸಿತು.**

**ಡಾ. ವಿನಾಯಕ ನಾಮಣ್ಣವರ, ಸಹಾಯಕ ಪ್ರಾಧ್ಯಾಪಕರು, ಭಾಷಾನಿಕಾಯ, ಕ.ಸಂ.ವಿ.**

**ಶ್ರೀ ಋಷಿದೇವ್ ಎನ್. ಭಾರ್ಗವ, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ, ಕ.ಸಂ.ವಿ.**

**ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ವೇದಾಂತ ನಿಕಾಯ, ಕ.ಸಂ.ವಿ.**

**ವಿಷಯ 12: ವಿಶ್ವವಿದ್ಯಾಲಯದ ಸಂಜೆ ಕಾಲೇಜಿನ ನೂತನ ಪಾಠ್ಯಕ್ರಮಕ್ಕೆ ಅನುಮೋದನೆ ನೀಡುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2013-14ನೇ ಸಾಲಿನಿಂದ ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸಿದ್ದು, 2014-15ನೇ ಸಾಲಿನ ತರಗತಿಗಳನ್ನು ಪ್ರಾರಂಭಿಸಬೇಕಿದೆ. ಸಂಸ್ಕೃತ ಸಂಜೆ ಕಾಲೇಜಿಗೆ ದಿನಾಂಕ 20.05.2014ರಂದು ನಡೆದ ಅಧ್ಯಯನ ಮಂಡಳಿ ಸಭೆಯಲ್ಲಿ ನೂತನ ಪಾಠ್ಯಕ್ರಮವನ್ನು ರೂಪಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಂಸ್ಕೃತ ಸಂಜೆ ಕಾಲೇಜಿನ ನೂತನ ಪಾಠ್ಯಕ್ರಮಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು**

**ವಿಷಯ 01: ವಿಶ್ವವಿದ್ಯಾಲಯದ ಎನ್. ಎಸ್. ಎಸ್. ಘಟಕವನ್ನು ಸ್ಥಾಪಿಸುವ ಬಗೆಗೆ**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 4 ವರ್ಷಗಳು ಕಳೆದಿದ್ದು, ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಹಾಗೂ ಸಮಾಜಸೇವೆ, ರಾಷ್ಟ್ರೀಯತೆ ಹಾಗೂ ಶಿಸ್ತಿನ ಗುಣಗಳನ್ನು ರೂಪಿಸಲು ರಾಷ್ಟ್ರೀಯ ಸೇವಾ ಯೋಜನೆಯು (ಎನ್.ಎಸ್.ಎಸ್.) ಉತ್ತಮವಾಗಿದ್ದು, ವಿಶ್ವವಿದ್ಯಾಲಯದ ಮಟ್ಟದಲ್ಲಿ ಎನ್.ಎಸ್.ಎಸ್ ಘಟಕ ಸ್ಥಾಪಿಸಲು ಹಾಗೂ ಈ ಘಟಕದ ಸಂಯೋಜಕರನ್ನು ನೇಮಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಈ ಯೋಜನೆಯನ್ನು ಶ್ಲಾಘಿಸಿದ ಸಭೆಯು ಒಪ್ಪಿಗೆ ನೀಡಿತು. ವಿಶ್ವವಿದ್ಯಾಲಯದ ಮಟ್ಟದಲ್ಲಿ ಈ ಘಟಕದ ಸಂಚಾಲಕರಾಗಿ ಡಾ. ಸಂತೋಷ್ ಹಾನಗಲ್, ಉಪನಿರ್ದೇಶಕರು, ಕ.ಸಂ.ವಿ, ಇವರನ್ನು ನಿಯೋಜಿಸಲು ಒಪ್ಪಿಗೆ ಸೂಚಿಸಿತು.**

**ವಿಷಯ 02:** **ಶ್ರೀ ಗಜಾನನ ಸಂಸ್ಕೃತ ಪಾಠಶಾಲೆ, ಸಾಗರ – ಈ ಪಾಠಶಾಲೆಗೆ ಖಾಯಂ ಮಾನ್ಯತೆ ನೀಡಿರುವ ಬಗ್ಗೆ ಘಟನೋತ್ತರ ಅನುಮತಿ ನೀಡುವ ಕುರಿತು**

**ಟಿಪ್ಪಣಿ:** ಶ್ರೀ ಗಜಾನನ ಸಂಸ್ಕೃತ ಪಾಠಶಾಲೆ, ಸಾಗರ – ಈ ಪಾಠಶಾಲೆಗೆ ತ್ರಿಸದಸ್ಯ ಸಮಿತಿ ಸದಸ್ಯರು ಭೇಟಿ ನೀಡಿ ತಪಾಸಣೆ ನಡೆಸಿ ಪರಿಶೀಲಿಸಲಾಗಿ, ಸದರಿ ಪಾಠಶಾಲೆಯು ಮೂಲಭೂತ ಸೌಕರ್ಯಗಳನ್ನು ಹೊಂದಿ, ಸ್ವಂತ ಕಟ್ಟಡವನ್ನು ಹೊಂದಿದೆ. ಈ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ಉತ್ತಮವಾಗಿದ್ದು, ಪ್ರಸಿದ್ಧ ಪರೀಕ್ಷಾ ಫಲಿತಾಂಶವು ತೃಪ್ತಿಕರವಾಗಿದೆ. ಈ ಪಾಠಶಾಲೆಗೆ ಖಾಯಂ ಮಾನ್ಯತೆ ನೀಡಲು ತ್ರಿಸದಸ್ಯ ಸಮಿತಿಯು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ನಿರ್ದೇಶನಾಲಯವು ಖಾಯಂ ಮಾನ್ಯತೆ ನೀಡಿದೆ. ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:** **ಈ ಪಾಠಶಾಲೆಯ ಮಾನ್ಯತೆಗೆ ಸಂಬಂಧಿಸಿದಂತೆ ಸಭೆಯು ಒಪ್ಪಿಗೆ ನೀಡಿತು.**

**ವಿಷಯ 03:** **ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ಪ್ರವೇಶ ನಿಯಮಗಳನ್ನು ಪುನಾರೂಪಿಸುವ ಬಗೆಗೆ**

**ಟಿಪ್ಪಣಿ:** ವಿಶ್ವವಿದ್ಯಾಲಯವು 2014-15ನೇ ಸಾಲಿನಿಂದ ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಿದೆ. ಈ ಕೋರ್ಸುಗಳ ಪ್ರವೇಶ ನಿಯಮಗಳಲ್ಲಿ ಪಿ.ಯು.ಸಿ ವಿದ್ಯಾರ್ಹತೆಯನ್ನು ಅನಿವಾರ್ಯವೆಂದು ವಿಧಿಯು ನಿಗದಿಪಡಿಸಿದೆ. ಕರ್ನಾಟಕ ರಾಜ್ಯ ಜ್ಯೋತಿಷ್ಯ ಸಂಸ್ಥೆಗಳ ಒಕ್ಕೂಟದ ಕಾರ್ಯದರ್ಶಿಗಳು ಈ ಕೋರ್ಸುಗಳ ಪ್ರವೇಶ ನಿಯಮಗಳನ್ನು ಪುನಾರೂಪಿಸಲು ಪತ್ರಿಸಿರುತ್ತಾರೆ. ಜ್ಯೋತಿಷ್ಯ ಸರ್ಟಿಫಿಕೇಟ್ ಕೋರ್ಸಿನಲ್ಲಿ ನೋಂದಣಿ ಪಡೆಯಲು ಜ್ಯೋತಿಷ್ಯ ಪ್ರವೇಶ/ಜ್ಯೋತಿಷ್ಯ ಪ್ರವೀಣ/ಜ್ಯೋತಿಷ್ಯ ಪ್ರವೇಶಿಕಾ/ಜ್ಯೋತಿಷ್ಯ ವಿಶಾರದ/ಜ್ಯೋತಿಷ್ಯ ಪರಿಣಿತ/ಜ್ಯೋತಿಷ್ಯ ಪ್ರಭಾಕರ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ಮತ್ತು ಜ್ಯೋತಿಷ್ಯ ಡಿಪ್ಲೊಮಾ ಕೋರ್ಸಿನಲ್ಲಿ ನೋಂದಣಿ ಪಡೆಯಲು ಜ್ಯೋತಿಷ್ಯ ವಿಭೂಷಣ/ಜ್ಯೋತಿಷ್ಯ ಆಚಾರ್ಯ/ಜ್ಯೋತಿಷ್ಯ ವಿದ್ವಾನ್/ಜ್ಯೋತಿಷ್ಯ ಭೂಷಣ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರು ಪ್ರವೇಶ ಪಡೆಯಬಹುದೆಂದು ಪ್ರವೇಶ ನಿಯಮಗಳನ್ನು ಪುನಾರೂಪಿಸಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:** **ವಿಶ್ವವಿದ್ಯಾಲಯವು ಪುನಾರೂಪಿಸಿರುವ ಜ್ಯೋತಿಷ್ಯ ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರವೇಶ ನಿಯಮಗಳನ್ನು ಸಭೆಯು ವಿವರವಾಗಿ ಪರಿಶೀಲಿಸಿ ಒಪ್ಪಿಗೆ ನೀಡಿತು.**

**ವಿಷಯ 04:** **ವಿಶ್ವವಿದ್ಯಾಲಯದ ಉತ್ತರಪತ್ರಿಕೆಗಳನ್ನು ಫಲಿತಾಂಶ ಪ್ರಕಟಿಸಿದ ಆರು ತಿಂಗಳ ನಂತರ ವಿಲೇವಾರಿ ಮಾಡುವ ಬಗೆಗೆ**

**ಟಿಪ್ಪಣಿ:** ವಿಶ್ವವಿದ್ಯಾಲಯವು ಪ್ರತಿ ವರ್ಷ ಪರೀಕ್ಷೆಗಳನ್ನು ನಡೆಸಿ ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡಿಸಿ ಫಲಿತಾಂಶ ಪ್ರಕಟಿಸುತ್ತದೆ. ಈ ಉತ್ತರಪತ್ರಿಕೆಗಳನ್ನು ಆಯಾ ವರ್ಷದಲ್ಲಿ ಫಲಿತಾಂಶ ಪ್ರಕಟಿಸಿದ ಆರು ತಿಂಗಳ ನಂತರ ನಿಯಮಾನುಸಾರ ವಿಲೇವಾರಿ ಮಾಡಬಹುದಾಗಿರುತ್ತದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:** **ಆಯಾ ವರ್ಷದ ಉತ್ತರಪತ್ರಿಕೆಗಳನ್ನು ಪರೀಕ್ಷೆ ನಡೆದ ಒಂದು ವರ್ಷದ ನಂತರ ನಿಯಮಾನುಸಾರ ವಿಲೇವಾರಿ ಮಾಡಲು ಸಭೆಯು ಒಪ್ಪಿಗೆ ನೀಡಿತು.**

**ವಿಷಯ 05:** **ವಿಶ್ವವಿದ್ಯಾಲಯದ ವೇದಾಂತ ಹಾಗೂ ಶಾಸ್ತ್ರನಿಕಾಯಕ್ಕೆ ಸಂಬಂಧಿಸಿದಂತೆ ಎರಡು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಆಯೋಜಿಸುವ ಬಗೆಗೆ.**

**ಟಿಪ್ಪಣಿ:** ವಿಶ್ವವಿದ್ಯಾಲಯದ ವೇದಾಂತ ಹಾಗೂ ಶಾಸ್ತ್ರ ನಿಕಾಯದ ವತಿಯಿಂದ "ವೇದಾಂತ ದರ್ಶನೇಷು ನವ್ಯನ್ಯಾಯ ವಿಮರ್ಶಃ" ಹಾಗೂ "Western Philosophy and its co-relation to Indian Philosophical concepts" ಎಂಬ ಎರಡು ವಿಷಯಗಳ ಬಗೆಗೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ನಡೆಸಬೇಕಾಗಿದೆ. ಇದಕ್ಕೆ ಅಂದಾಜು ತಲಾ 1 ಲಕ್ಷಗಳು ವೆಚ್ಚಗಲಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:** **ಮಾನ್ಯ ಕುಲಪತಿಗಳು ಈ ವಿಚಾರ ಸಂಕಿರಣಗಳ ಮಹತ್ವವನ್ನು ಸಭೆಗೆ ತಿಳಿಸಿದರು. ಸಭೆಯು ವಿಚಾರ ಸಂಕಿರಣಗಳ ಎಲ್ಲ ವಿವರಗಳನ್ನು ಪರಿಶೀಲಿಸಿ ಒಪ್ಪಿಗೆ ನೀಡಿತು. ಸಹಯೋಗಿ ಸಂಸ್ಥೆಗಳ ಸಹಾಯವನ್ನು ಪಡೆದು ನಡೆಸಲು ಸೂಚಿಸಿತು.**

**ವಿಷಯ 06:** **ಕರ್ನಾಟಕ ರಾಜ್ಯ ವೇದ ಸಮ್ಮೇಳನವನ್ನು ನಡೆಸುವ ಬಗೆಗೆ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉದ್ದೇಶಗಳಲ್ಲಿ ವೇದಪರಂಪರೆಯ ಸಂರಕ್ಷಣೆಯೂ ಒಂದು ಪ್ರಧಾನವಾದ ಉದ್ದೇಶವಾಗಿದೆ. ಈ ಸಂಬಂಧ ಒಂದು ವೇದ ಸಮ್ಮೇಳನವನ್ನು ಆಯೋಜಿಸಲು ಉಜ್ಜಯಿನಿಯ ವೇದವಿದ್ಯಾಪ್ರತಿಷ್ಠಾನಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈಗಾಗಲೇ, ಎರಡು ಬ್ಯಾಂಕ್‌ಗಳಿಂದ ಸಮ್ಮೇಳನಕ್ಕಾಗಿ ಸಹಾಯಧನದ ಆಶ್ವಾಸನೆ ಒದಗಿ ಬಂದಿದೆ. ಈ ವರ್ಷದಲ್ಲಿ ಈ ಸಮ್ಮೇಳನವನ್ನು ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸಲು ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ:** **ಮಾನ್ಯ ಕುಲಪತಿಗಳು ಸಭೆಗೆ ಈ ಸಮ್ಮೇಳನದ ರೂಪುರೇಷೆಗಳನ್ನು ವಿವರಿಸಿದರು. ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ವೇದ ಸಮ್ಮೇಳನವನ್ನು ನಡೆಸಲು ಹರ್ಷದಿಂದ ಸಭೆಯು ಒಪ್ಪಿಗೆ ಸೂಚಿಸಿತು.**

Srivara

**ಪ್ರೊ. ಎ. ಗಿರೀಶ್‌ಚಂದ್ರ**
ಸದಸ್ಯ ಕಾರ್ಯದರ್ಶಿ

**ಪ್ರೊ. ಶ್ರೀನಿವಾಸ ವರಖೇಡಿ**
ಅಧ್ಯಕ್ಷರು